ಕರ್ನಾಟಕ ವಿಧಾನಸಭೆ

ಬುಧವಾರ 22ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ತೀರ್ಮ:

ವಿಷಯ: ಅಧಿವೇಶನ ಸಂದರ್ಭದಲ್ಲಿ ಸಚಿವರು ಹಾಗೂ ಶಾಸಕರು ವಿಧಾನಸಭೆಯ ಸಭಾಂಗಣದ ಪ್ರವೇಶ ದ್ವಾರದ ಮೂಲಕ ಪ್ರವೇಶ ಪತ್ರ ಹೊಂದಿರದ ವ್ಯಕ್ತಿಗಳನ್ನು ಕರೆತರುತ್ತಿರುವುದರ ಬಗ್ಗೆ.

ಅಧ್ಯಕ್ಷರು : ಅಧಿವೇಶನ ನಡೆಯುತ್ತಿರುವ ಸಂದರ್ಭಗಳಲ್ಲಿ ಮಾನ್ಯ ಸಚಿವರು ಹಾಗೂ ಶಾಸಕರು ವಿಧಾನ ಸಭೆಯ ಸಭಾಂಗಣದ ಪ್ರವೇಶ ದ್ವಾರದ ಮೂಲಕ ಪ್ರವೇಶ ಪತ್ರ ಹೊಂದಿರದ ವ್ಯಕ್ತಿಗಳನ್ನು ಕರೆ ತರುವುದು ಗಮನಕ್ಕೆ ಬಂದಿದೆ. ಆದುದರಿಂದ ಸದನ ನಡೆಯುವ ಸಂದರ್ಭಗಳಲ್ಲಿ ವಿಧಾನ ಸಭೆಯ ಮೊಗಸಾಲೆಗಳಲ್ಲಿ ಮಾನ್ಯ ಸದಸ್ಯರುಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಸಭಾಂಗಣದ ಪ್ರವೇಶ ದ್ವಾರಗಳ ಮುಖಾಂತರ ಮೊಗಸಾಲೆಗಳಿಗೆ ಅಧಿಕೃತ ಪ್ರವೇಶ ಪತ್ರ ಹೊಂದಿರುವವರು ಮಾತ್ರ ಪ್ರವೇಶಿಸಬಹುದಾಗಿದೆ. ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ದಂಡ ನಾಯಕರಿಗೆ ಸೂಚನೆಯನ್ನು ನೀಡಿರುತ್ತೇನೆ ಆದುದರಿಂದ ಭದ್ರತಾ ಸಿಬ್ಬಂದಿಯವರು ಕಟ್ಟುನಿಟ್ಟಾಗಿ ಅವರ ಕಾರ್ಯವನ್ನು ನಿರ್ವಹಿಸಲು ಅನುಕೂಲವಾಗುವಂತೆ ಮಾನ್ಯ ಸಚಿವರುಗಳು ಹಾಗೂ ಸದಸ್ಯರುಗಳು ತಮ್ಮೊಂದಿಗೆ ಅಧಿಕೃತ ಪಾಸ್ ಅನ್ನು ಹೊಂದಿರದ ವ್ಯಕ್ತಿಗಳನ್ನು ಕರೆತರಬಾರದೆಂದು ಈ ಮೂಲಕ ತಿಳಿಸಲಾಗಿದೆ ಹಾಗೂ ಈ ದಿಸೆಯಲ್ಲಿ ಎಲ್ಲರ ಸಹಕಾರವನ್ನೂ ಸಹ ಕೋರುತ್ತೇನೆ.

2. ಪ್ರಶ್ನೋತ್ತರಗಳು:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಜಿಲ್ಲಾ ಪರಿಷತ್‌ನಿಂದ ಅನುಮತಿ ಪಡೆದ ಶಾಲೆಗಳನ್ನು ಅನುದಾನಕ್ಕೊಳಪಡಿಸುವಲ್ಲಿ ತಾರತಮ್ಯತೆ.

16 (9) ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್‌ಗಳಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ತೆರೆಯಲು ಅನುಮತಿ ನೀಡಲು ಸರ್ಕಾರ ಆದೇಶ ನೀಡಿದ್ದು ನಿಜವೇ?